

ನ್ಯೂಟನ್ ಮನೆ

# ನ್ಯೂಟನ್ ಮನೆಯಲ್ಲಿ ಕನ್ನಡ ಪುಸ್ತಕ!

■ ಸಿಡ್ನಿ ಶ್ರೀನಿವಾಸ್

ಹೆಜ್ಜೆಹೆಜ್ಜೆಗೂ ಚರಿತ್ರೆಯುಳ್ಳ ಲಂಡನ್, ಪ್ಯಾರಿಸ್, ವಿಯೆನ್ನಾಗಳಂತಹ ನಗರಗಳಲ್ಲಿ ಸಂಚರಿಸುವುದು ನನಗೆ ಅತಿ ಮೆಚ್ಚಿನ ಕೆಲಸ. ವಿಜ್ಞಾನಿಗಳು, ಕವಿಗಳು ಮತ್ತು ಚಿಂತಕರು ವಾಸಿಸಿದ ಕ್ಷೇತ್ರಗಳಿಗೆ ಭೇಟಿ ಕೊಡುವುದು ನನ್ನ ಭಾಗ್ಯವೆಂದೇ ಎಣಿಸಿದ್ದೇನೆ. ಇತ್ತೀಚೆಗೆ ಲಂಡನ್ನಿನಲ್ಲಿ ಒಂದು ತಿಂಗಳು ನೆಲೆಸಿದ್ದಾಗ ಐಸಾಕ್ ನ್ಯೂಟನ್ ಜನ್ಮಸ್ಥಳ, ವೂಲ್ಸ್‌ಥೋರ್ಪ್ ಮೇನರ್ (**Woolsthorpe Manor**) ಅನ್ನು ನೋಡುವ ಮತ್ತೊಂದು ಅವಕಾಶ ಒದಗಿತು.

ನಾನು ಮತ್ತು ನನ್ನ ಪತ್ನಿ ಉಷಾ ಟ್ರೈನ್ ಹಿಡಿದು ಲಂಡನ್ನಿನಿಂದ ಹೊರಟು ಮೊದಲು ಗ್ರಾಂಥಾಮ್ (**Grantham**) ಎಂಬ ಊರಲ್ಲಿ ಇಳಿದೆವು. ನೂರಾ ಅರವತ್ತು ಕಿಲೋಮೀಟರುಗಳ ಒಂದೂವರೆ ಗಂಟೆ ಪ್ರಯಾಣ. ಇದು ಬ್ರಿಟನ್ನಿನ ಮಾಜಿ ಪ್ರಧಾನಿ ಮಾರ್ಗರೆಟ್ ಥ್ಯಾಚರ್ ಅವರ ಕ್ಷೇತ್ರ. ಅಲ್ಲಿಂದ ಟ್ಯಾಕ್ಸಿ ಹಿಡಿದು 15 ಕಿ.ಮೀ. ಚಲಿಸಿ ವೂಲ್ಸ್‌ಥೋರ್ಪ್ ಮೇನರ್ ತಲಪಿದೆವು. ಇಂಗ್ಲಿಷ್ ಹಳ್ಳಿ, ಹತ್ತಿಪ್ಪತ್ತು ಮನೆಗಳು. ಅಲ್ಲೊಂದು ಇಲ್ಲೊಂದು ಕಾರ್ ಸಂಚಾರ. ನಾಯಿಯೊಂದಿಗೆ ನಡೆದಾಡುವ ನಾಕಾರು ಜನ.

ಇದು ಕೇವಲ ನ್ಯೂಟನ್ ಹುಟ್ಟಿದ ಮನೆಯಲ್ಲ. ಗುರುತ್ವಾಕರ್ಷಣೆ, ಬೆಳಕಿನ ಸ್ವರೂಪ ಮತ್ತು ಕ್ಯಾಲ್ಕುಲಸ್ (**Calculus**) ಜನಿಸಿದ ಮನೆ. 1842ರಲ್ಲಿ ಇಲ್ಲಿ ಜನ್ಮ ತಾಳಿದ ನ್ಯೂಟನ್, 'ಮನೆಯಲ್ಲಿದ್ದುಕೊಂಡು ದನ, ಕುರಿಗಳನ್ನು




ನ್ಯೂಟನ್ ಮನೆಯಲ್ಲಿ ಕನ್ನಡ ಕೃತಿ